ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 2, May-June 2025, Pp. 133-139
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮಹಿಳಾ ಅಂಕಣ ಸಾಹಿತ್ಯ : ಪ್ರಭುತ್ವದ ಅಸಮಾನತೆಯ ನೆಲೆಗಳು

**ಶೋಭ ಎಲ್.ಎನ್**
ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ,
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

***Abstract:***
*ಒಂದು ರಾಷ್ಟ್ರದ ಪ್ರಜೆಗಳು ಸುಖ ಶಾಂತಿ ಹಾಗೂ ನೆಮ್ಮದಿಯಿಂದ ಜೀವನ ನಡೆಸಲು ಒಂದು ಆಡಳಿತದ ವ್ಯವಸ್ಥೆಯ ಅವಶ್ಯಕತೆ ಇರುತ್ತದೆ. ಅಂತಹ ಆಡಳಿತ ವ್ಯವಸ್ಥೆಯನ್ನು ನಿಯಮಾನುಸಾರ ಮುಂದುವರಿಸಿಕೊಂಡು ಹೋಗುವ ಅಧಿಕಾರ ಹೊಂದಿರುವ ಸಂಸ್ಥೆಯನ್ನು ಪ್ರಭುತ್ವ ಎಂದು ಕರೆಯುತ್ತಾರೆ. ಈ ಸಂಸ್ಥೆಯು ಪ್ರಜೆಗಳಿಗೆ ಅನುಕೂಲವಾಗುವ ಕಾನೂನುಗಳನ್ನು ರಚಿಸುವ ಮತ್ತು ಅದನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಆಳ್ವಿಕೆ ನಡೆಸುವ ಈ ಪ್ರಭುತ್ವ ವ್ಯವಸ್ಥೆಯಲ್ಲಿಯೂ ನಿರಂತರ ಬದಲಾವಣೆಗಳಾಗಿವೆ. ರಾಜಾಧಿಪತಿಯ ನಿರಂಕುಶ ಪ್ರಭುತ್ವದಿಂದ ಹಿಡಿದು ಸಮಾಜವಾದ ಪ್ರಜಾಪ್ರಭುತ್ವದಂತವುಗಳವರೆಗೆ ಇದರ ಹಾದಿ ಸಾಗಿದೆ. ಪ್ರಜಾಪ್ರಭುತ್ವವೇ ಅತ್ಯುತ್ತಮವಾದುದೆಂದು, ಪ್ರಪಂಚದಾದ್ಯಂತ ಅನುಸರಿಸಬೇಕಾದ ಮಾದರಿ ವ್ಯವಸ್ಥೆ ಇದೆಂದು ಹಲವು ದೇಶಗಳು ಆಡಳಿತ ವ್ಯವಸ್ಥೆಯಲ್ಲಿ ಅನುಸರಿಸುತ್ತಿವೆ. ಇತ್ತೀಚಿನ ದಿನಗಳಲ್ಲಿ ಜಾತಿ, ಧರ್ಮ, ಸಂಸ್ಕೃತಿ ಸೇರಿದಂತೆ ವಿವಿಧ ವಲಯಗಳಲ್ಲಿ ಅಸಮಾನತೆ ಹೆಚ್ಚುತ್ತಿದ್ದು, ಅದರ ವಿರುದ್ಧ ಸೆಣಸುವ ಪ್ರತ್ಯಕ್ಷ ಮತ್ತು ಪರೋಕ್ಷವಾದ ಅಗಣಿತ ಹೋರಾಟಗಳು ನಡೆದಿವೆ. ಇಂತಹ ಪ್ರಭುತ್ವದ ಅಸಮಾನತೆಯ ನೆಲೆಗಳ ವಿಚಾರ ಕುರಿತ ಅಂಕಣ ಬರಹಗಳ ವಿಮರ್ಶಾತ್ಮಕ ಚರ್ಚೆ, ವಿಶ್ಲೇಷಣೆ ಈ ಲೇಖನದಲ್ಲಿದೆ.*

***Keywords:*** *ಪ್ರಭುತ್ವ, ಮಹಿಳೆ, ಮಹಿಳಾ ಅಂಕಣ ಸಾಹಿತ್ಯ, ರಾಜಪ್ರಭುತ್ವ, ಪ್ರಜಾಪ್ರಭುತ್ವ*

## ಪೀಠಿಕೆ

ರಾಜಾಧಿಪತಿಯ ನಿರಂಕುಶ ಪ್ರಭುತ್ವದಿಂದ ಹಿಡಿದು ಸಮಾಜವಾದದ ಪ್ರಜಾಪ್ರಭುತ್ವದವರೆಗೆ ಪ್ರಭುತ್ವದ ಹಾದಿ ಸಾಗಿದೆ. ಪ್ರಜಾಪ್ರಭುತ್ವವೇ ಅತ್ಯುತ್ತಮವಾದುದೆಂದು,ಪ್ರಪಂಚದಾದ್ಯಂತ ಅನುಸರಿಸ ಬೇಕಾದ ಮಾದರಿ ವ್ಯವಸ್ಥೆ ಇದೆಂದು ಹಲವು ದೇಶಗಳು ಆಡಳಿತ ವ್ಯವಸ್ಥೆಯಲ್ಲಿ ಅನುಸರಿಸುತ್ತಿವೆ. ಅಧಿಕಾರ ಪಡೆದ ರೀತಿಯು ಭಿನ್ನವಾಗಿರುವಂತೆ ಅದನ್ನು ನಿರ್ವಹಿಸಿದ ರೀತಿಯೂ ವೈವಿಧ್ಯತೆಯಿಂದ ಕೂಡಿದೆ. ಅದರಂತೆ ಪ್ರಭುತ್ವದಲ್ಲಿ ರಾಜಪ್ರಭುತ್ವ, ನಿರಂಕುಶ ಪ್ರಭುತ್ವ, ಪ್ರಜಾಪ್ರಭುತ್ವ, ಮಿತಜನ ಪ್ರಭುತ್ವ ಹೀಗೆ ಸಾಕಷ್ಟು ರೀತಿಯಲ್ಲಿ ಕಾಣಿಸಿಕೊಂಡಿವೆ. ನಮ್ಮ ದೇಶದಲ್ಲಿ ಆಡಳಿತ ವ್ಯವಸ್ಥೆಯಲ್ಲಿ ಈ ಹಿಂದೆ ರಾಜಪ್ರಭುತ್ವ ಇದ್ದರೆ, ಈಗ ಪ್ರಜಾಪ್ರಭುತ್ವವಿದೆ. ಪ್ರಸ್ತುತ ಜನಪ್ರಿಯವಾಗಿರುವ ಆಡಳಿತ ವ್ಯವಸ್ಥೆಯಾದ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳಾಗಿದ್ದು, ಸಮಾನತೆ, ಅಭಿವ್ಯಕ್ತಿ ಸ್ವಾತಂತ್ರ್ಯ, ಮಾನವ ಹಕ್ಕು, ಅನ್ಯಾಯವನ್ನು ಪ್ರತಿಭಟಿಸುವ ಹಕ್ಕು ಇಂತಹ ಹಲವಾರು ಶ್ರೇಷ್ಠ ಅಂಶಗಳು ಇದರಲ್ಲಿ ಅಡಕವಾಗಿವೆ.

***Please cite this article as:*** ಶೋಭ ಎಲ್. ಎನ್. (2025). ಮಹಿಳಾ ಅಂಕಣ ಸಾಹಿತ್ಯ : ಪ್ರಭುತ್ವದ ಅಸಮಾನತೆಯ ನೆಲೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 4(2), 133–139

ಪ್ರಜೆಗಳಿಂದಲೇ ಪ್ರಜೆಗಳಿಗಾಗಿ ಪ್ರಜೆಗಳಿಗೋಸ್ಕರವೇ ನಡೆಸುವ ಆಡಳಿತ ಪ್ರಜಾಪ್ರಭುತ್ವವೆನಿಸುತ್ತದೆ ಎಂದು ಅಬ್ರಾಹಿಂ ಲಿಂಕನ್ ವ್ಯಾಖ್ಯಾನಿಸಿದ್ದಾರೆ. ದೇಶದ ಪ್ರಜೆಗಳ ವರ್ತನೆಯನ್ನು ಪ್ರಭಾವಿಸುವ ಅಥವಾ ಬದಲಾಯಿಸುವ ನಿರ್ಧಾರಗಳನ್ನು ಜಾರಿಗೊಳಿಸುವ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪಿನ ಸಾಮರ್ಥ್ಯ ಪ್ರಭುತ್ವವೆನಿಸಿದೆ. ಇದಕ್ಕೆ ಬದಲಾಗಿ ಅಧಿಕಾರವನ್ನು ಹಂತ ಹಂತವಾಗಿ ವಿಕೇಂದ್ರಿಕರಿಸುತ್ತಾ ನ್ಯಾಯಯುತವಾಗಿ ನಿರ್ವಹಿಸದೆ, ಇದಕ್ಕೆ ವಿರುದ್ಧವಾಗಿ ಬಲಪ್ರಯೋಗದ, ನ್ಯಾಯ ಸಮ್ಮತವಲ್ಲದ ಅಧಿಕಾರದಿಂದ ಕೇಂದ್ರೀಕೃತ, ಏಕಪಕ್ಷೀಯವಾಗಿ ನಡೆದುಕೊಂಡು ವಾತಾವರಣವನ್ನು ಹದಗೆಡಿಸುತ್ತಾ ಅನ್ಯಾಯದ ಜೊತೆಗೆ ಅಸಮಾನತೆಯನ್ನು ಸೃಷ್ಟಿಸುತ್ತಿದೆ. ಕಾನೂನುಗಳ ಬದಲು ಬಲದ ಆಧಾರದ ಮೇಲೆ ಜನರನ್ನು ಆಳುತ್ತಾ ನಿರ್ದಯಾತ್ಮಕವಾಗಿ ವರ್ತಿಸುತ್ತಿದೆ. ಇವೆಲ್ಲದರ ಪರಿಣಾಮ ಪ್ರಭುತ್ವವನ್ನು ನಡೆಸುವವ ನಿರಂಕುಶಾಧಿಕಾರಿ ಎನಿಸಿಕೊಳ್ಳುತ್ತಾನೆ. “ಪರಮಾಧಿಕಾರವುಳ್ಳ ಸರ್ವಾಧಿಕಾರಿಯ ಪಂಚೇಂದ್ರಿಯಗಳು ಪ್ರಾಮಾಣಿಕತೆ ಮತ್ತು ಅಧಿಕೃತತೆಯನ್ನು ಕಳೆದುಕೊಳ್ಳುತ್ತವೆ. ಜನರೊಂದಿಗೆ ನೇರ ಸಂವಾದವನ್ನು ಬೆಳೆಸದೆ ಊಳಿಗಮಾನ್ಯ ಪದ್ಧತಿಯ ದರ್ಪದ ಮೂಲಕ ಜನರ ಬದುಕನ್ನು ಬಂಧಿಸುವ ಈ ಸರ್ವಾಧಿಕಾರಿ ಸ್ವತಃ ತಾನೇ ಬಂಧಿತನಾಗುತ್ತಾನೆ.”[6] ಇದರಂತೆ ಜನರ ಸ್ವಾತಂತ್ರ್ಯವನ್ನು ಕಟ್ಟಿ ಹಾಕಿ ಅಸಮಾನತೆ ನೆಲೆಯಲ್ಲಿ ಸಂವೇದನಾಶೀಲರಹಿತನಾಗಿ ಆಳುವವನ ನಿರಂಕುಶಪ್ರಭುತ್ವಕ್ಕೂ ಹೆಚ್ಚು ಆಯಸ್ಸಿಲ್ಲ. ಆದರೂ ಪ್ರಜಾಪ್ರಭುತ್ವದೊಳಗೆ ನಿರಂಕುಶತೆಯನ್ನು ಬೆರೆಸಿ ಆಡಳಿತ ನಿರ್ವಹಣೆ ಮಾಡುವ ಪ್ರವೃತಿಯೇ ಎಂದೆಂದಿಗಿಂತಲೂ ಇಂದಿನ ಸಮಾಜದಲ್ಲಿ ಕಾಣಬಹುದು.

ಇತ್ತೀಚಿನ ದಿನಗಳಲ್ಲಿ ದೇಶದ ಸಂವಿಧಾನಬದ್ಧ ಸಂಸ್ಥೆಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗದಂತಹ ಸ್ಥಿತಿಗೆ ತಲುಪಿವೆ. ಇತ್ತೀಚಿನ ದಿನಗಳಲ್ಲಿ ಜಾತಿ, ಧರ್ಮ, ಸಂಸ್ಕೃತಿ ಸೇರಿದಂತೆ ವಿವಿಧ ವಲಯಗಳಲ್ಲಿ ಅಸಮಾನತೆ ಹೆಚ್ಚುತ್ತಿದ್ದು, ಅದರ ವಿರುದ್ಧ ಸೆಣಸುವ ಪ್ರತ್ಯಕ್ಷ ಮತ್ತು ಪರೋಕ್ಷವಾದ ಅಗಣಿತ ಹೋರಾಟಗಳು ನಡೆದಿವೆ. ಇಂತಹ ಪ್ರಭುತ್ವದ ಅಸಮಾನತೆಯ ನೆಲೆಗಳ ವಿಚಾರ ಕುರಿತ ಅಂಕಣ ಬರಹಗಳ ವಿಮರ್ಶಾತ್ಮಕ ಚರ್ಚೆ, ವಿಶ್ಲೇಷಣೆ ಇಲ್ಲಿದೆ.

ಇಪ್ಪತ್ತನೆಯ ಶತಮಾನದ ಕೊನೆಯ ಭಾಗ ಹಾಗೂ ಇಪ್ಪತ್ತೊಂದನೆಯ ಶತಮಾನದ ಈವರೆಗೆ ಇನ್ನೂ ಕೆಲವು ದೇಶಗಳಲ್ಲಿ ಪ್ರಜಾಪ್ರಭುತ್ವ ಅಥವಾ ನಿರಂಕುಶಪ್ರಭುತ್ವ ಎರಡೂ ರೀತಿಯನ್ನು ಪ್ರಜಾಪ್ರಭುತ್ವದೊಳಗೆ ಮಿಳಿತಗೊಳಿಸಿ ಆಡಳಿತ ನಿರ್ವಹಿಸಲಾಗಿದೆ. ಆದರೆ ಜಗತ್ತಿನ ದೇಶಗಳಲ್ಲಿ ಪ್ರಜಾಪ್ರಭುತ್ವದ ಜೊತೆ ನಿರಂಕುಶ ಪ್ರಭುತ್ವದ ಆಡಳಿತವಿದ್ದ ಅನೇಕ ಉದಾಹರಣೆಗಳಿವೆ. ಜರ್ಮನಿ ದೇಶದ ನಾಝಿಗಳು ನರಮೇಧದಿಂದ ಅಟ್ಟಹಾಸ ಗೈಯ್ಯುತ್ತಿದ್ದ ನಾಝಿ ಪಕ್ಷದ ನಾಯಕ ಹಿಟ್ಲರ್‌ನನ್ನು ಬೆಂಬಲಿಸುತ್ತಾ ಅವನು ತೋರಿಸಿದ ಹಾದಿಯಲ್ಲಿ ನಡೆಯುತ್ತಾ ಯಹೂದಿಗಳ ಮೇಲೆ ನಡೆಸಿದ ಅನಾಗರಿಕ ದೌರ್ಜನ್ಯವು ನಿರಂಕುಶ ಪ್ರಭುತ್ವದ ಸಂಕೇತವಾಗಿದೆ. ಹಿಟ್ಲರ್‌ನ ನಿರಂಕುಶ ಪ್ರಭುತ್ವದ ದುರ್ವರ್ತನೆಯ ಬಗ್ಗೆ ದೀಪಾ ಹೀರೇಗುತ್ತಿ ಅವರ ‘ನಾನು ನೀವು ಮತ್ತು...’ ಅಂಕಣ ಕೃತಿಯ ‘ಮನುಷ್ಯತ್ವದ ಕರೆಗೆ ಕಲ್ಲಾಗದಿರೋಣ’ ಅಂಕಣವು ಬೆಳಕು ಚೆಲ್ಲುತ್ತದೆ. ಹಿಟ್ಲರ್ ನೇತೃತ್ವದ ಎಸ್.ಎಸ್ ಮಿಲಿಟರಿಯ ಮುಖ್ಯಾಧಿಕಾರಿ ರಾಲ್ಫ್ ಎಂಬುವವನು ಪ್ರತಿನಿತ್ಯ ಮಕ್ಕಳು ಸೇರಿದಂತೆ ಸಾವಿರಾರು ಯಹೂದಿಗಳನ್ನು ಗ್ಯಾಸ್ ಛೇಂಬರ್ ಎಂಬ ವಿಷಾನಿಲದ ಪ್ರದೇಶಕ್ಕೆ ತಳ್ಳುತ್ತಾ ನರಮೇಧ ಕೃತ್ಯವನ್ನು ನಿರ್ದಾಕ್ಷಿಣ್ಯವಾಗಿ ಮಾಡುತ್ತಿದ್ದ. ಒಂದು ಬಾರಿ ಇವನ ಮಗ ಆಕಸ್ಮಿಕವಾಗಿ ಯಹೂದಿಗಳ ಮಧ್ಯೆ ಸೇರ್ಪಡೆಗೊಂಡು ಮೃತನಾಗುತ್ತಾನೆ. ಜನಾಂಗಭೇದ ಪ್ರೇರಿತ ಪ್ರಭುತ್ವದ ನೇರ ಪರಿಣಾಮ ತನ್ನ

ಕುಟುಂಬಕ್ಕಾದಾಗ ಮಾತ್ರ ರಾಲ್ಫ್‌ನಿಗೆ ಮನುಷ್ಯತ್ವದ ಪ್ರಶ್ನೆ ಎದುರುಗೊಳ್ಳುವುದರಲ್ಲಿ ಪ್ರಭುತ್ವದ ಸಂಕುಚಿತತೆಯನ್ನು ಗ್ರಹಿಸಬಹುದು.

ನೇಮಿಚಂದ್ರ ಅವರ 'ಬದುಕು ಬದಲಿಸಬಹುದು ಭಾಗ 4' ಅಂಕಣ ಕೃತಿಯ 'ನೆವರ್ ಎಗೇನ್–ಬೇಡ ಇನ್ನೆಂದಿಗೂ ಬೇಡ' ಅಂಕಣವೂ ಜರ್ಮನಿಯ ನಾಝಿ ಪಕ್ಷದ ಹಿಟ್ಲರ್‌ನ ನಿರಂಕುಶಪ್ರಭುತ್ವದ ದುರಾಡಳಿತವನ್ನು ಬಯಲಿಗೆಳೆಯುತ್ತದೆ. ನಿಮಿಷದಲ್ಲಿ 150 ಜನರನ್ನು ಏಕಕಾಲದಲ್ಲಿ 'ಜೈಕ್ಲಾನ್ ಬಿ' ಎಂಬ ವಿಷದ ಅನಿಲದಿಂದ ಯಹೂದಿಗಳನ್ನು ಉಸಿರು ಕಟ್ಟಿಸಿ ಸಾಯಿಸಲಾಗುತ್ತಿತ್ತು. ಹೀಗೆ ಸತ್ತ ದೇಹಗಳನ್ನು ಕ್ರಮೆಟೇರಿಯಂ ಎಂಬ ಯಂತ್ರದಲ್ಲಿ ತುರುಕಿ ಸುಟ್ಟು ಬೂದಿಯಾಗಿಸಲಾಗುತ್ತಿತ್ತು. "ಮಾನವನ ಇಡೀ ದೇಹ ನಿಮಿಷ ಮಾತ್ರದಲ್ಲಿ ಹಿಡಿ ಬೂದಿಯಾಗುವ ಕಲ್ಪನೆ ಹಿಟ್ಲರ್‌ನ ನಿರಂಕುಶಪ್ರಭುತ್ವ ಪ್ರಭಾವದ ನರಮೇಧ ಸ್ವರೂಪವನ್ನು ತಿಳಿಸುತ್ತದೆ. ಇಂತಹ ಜನಾಂಗ ಭೇದ ಹೊಂದಿರುವ ಹತ್ಯಾಕಾಂಡವನ್ನು ವಿರೋಧಿಸುವ ಧೈರ್ಯ ಅಲ್ಲಿನ ಪ್ರಜೆಗಳಿಗಿರಲಿಲ್ಲ. ಇದರಿಂದ ಸುಮಾರು ನಲವತ್ತೂರು ಸಾವಿರಕ್ಕೂ ಹೆಚ್ಚು ಜನರ ಹತ್ಯೆ ಸರಾಗವಾಗಿ ನಡೆಯಿತು" ಎಂದು ಈ ಅಂಕಣದಲ್ಲಿ ವಿಷಾದ ವ್ಯಕ್ತವಾಗಿದೆ. ಕಾರಣವಿಲ್ಲದೆಯೂ ನರಹತ್ಯೆ ಮಾಡುತ್ತಿದ್ದ ಹಿಟ್ಲರ್ ನಿರಂಕುಶಪ್ರಭುತ್ವ ಅಂಕೆ ಇಲ್ಲದೆ ಅಂಚಿಗೆ ತಲುಪಿತ್ತು ಎಂಬ ವಾಸ್ತವತೆ ಅರಿವಾಗುತ್ತದೆ.

ಡಾ. ಎಚ್.ಎಸ್. ಅನುಪಮಾ ಅವರ 'ನೋಯುವ ಹಲ್ಲಿಗೆ ಹರಳುವ ನಾಲಿಗೆ' ಅಂಕಣ ಕೃತಿಯ 'ಮಂಡೇಲಾ ಮತ್ತು ಆಫ್ರಿಕಾ : ಸುಲಭವಲ್ಲ ಸ್ವಾತಂತ್ರ್ಯದೆಡೆಗೆ ನಡಿಗೆ' ಅಂಕಣವು ದೇಶದ ವಸಾಹತು ಪೂರ್ವ, ವಸಾಹತು ಕಾಲ ಮತ್ತು ಸ್ವತಂತ್ರ ಕಾಲದಲ್ಲಿ ಪ್ರಭುತ್ವದ ಶೋಷಣೆಗೆ ನಲುಗಿದ ಆಫ್ರಿಕಾ ದೇಶದ ಜನತೆಯ ದುಸ್ಥಿತಿಯನ್ನು ಮನವರಿಕೆ ಮಾಡಿಸುತ್ತದೆ. ಆಫ್ರಿಕಾವನ್ನು ಮಗದೊಂದು ಬಾರಿ ಅಮಾನವೀಯ, ಅಸಮಾನ ಮಲಿನ ತೊಳೆದು ಸ್ವಚ್ಛವಾಗಿಡುವ ನೆಲ್ಸನ್ ಮಂಡೇಲಾರಂತಹ ಮತ್ತೊಬ್ಬ ರಾಷ್ಟ್ರ ನಾಯಕನ ಉದಯದ ತೀವ್ರ ಅಪೇಕ್ಷೆ ವ್ಯಕ್ತವಾಗಿದೆ ಹಾಗೂ ಪ್ರಭುತ್ವದ ಹೊಡೆತಕ್ಕೆ ಸಿಲುಕಿದ ಆಫ್ರಿಕಾದಂತಹ ದೇಶಗಳಿಗದು ಅನಿವಾರ್ಯವೂ ಆಗಿದೆ ಎಂಬ ವಿಚಾರವನ್ನು ಈ ಅಂಕಣವು ಸ್ಪಷ್ಟಪಡಿಸುತ್ತದೆ.

ಡಾ. ಧರಣಿದೇವಿ ಮಾಲಗತ್ತಿಯವರ 'ಇಳೆಯ ಕಣ್ಣು' ಅಂಕಣ ಕೃತಿಯ 'ಕಾಲಪಾನಿಯಲ್ಲ–ತೀರ್ಥಕ್ಷೇತ್ರ' ಅಂಕಣವು ಹಿಟ್ಲರ್ ಸರ್ವಾಧಿಕಾರ ಅವಧಿಯ ನರಮೇಧವನ್ನು ನೆನಪಿಸುವ ಹಾಗೆ ಭಾರತದಲ್ಲಿ ಬ್ರಿಟಿಷ್ ವಸಾಹತು ಆಡಳಿತವು ಭಾರತೀಯರನ್ನು ಕಠೋರವಾಗಿ ನಡೆಸಿಕೊಂಡು ಮೃತ್ಯುಕೂಪಕ್ಕೆ ತಳ್ಳುತ್ತಿದ್ದ ಪ್ರತಿಕ್ರಿಯೆಯ ಬಗ್ಗೆ ಚರ್ಚಿಸುತ್ತದೆ. 'ಕಾಲಪಾನಿ' ಎಂಬುದು ವೀರ ಸಾವರ್ಕರ್ ಬಳಸಿದ ಪದ ಅಂದರೆ 'ಮೃತ್ಯು ಜಲ' ಎಂದರ್ಥ. ಭಾರತದ ವಸಾಹತುಕಾಲದಲ್ಲಿ ಬ್ರಿಟಿಷರು ತಮ್ಮ ವಿರುದ್ಧ ಇರುವವರನ್ನು ಸ್ವದೇಶದಿಂದ ಬೇರ್ಪಡಿಸಿ ಕ್ರೂರಹಿಂಸೆಗೆ ಗುರಿಪಡಿಸಲು ಕರಿನೀರಿನಿಂದ ಆವೃತ್ತವಾದ ಅಂಡಮಾನ್ ದ್ವೀಪದಲ್ಲಿ ಜೈಲು ನಿರ್ಮಿಸಿ, ಹಿಂಸೆ ಮತ್ತು ಸಾವಿಗೆ ಗುರಿ ಮಾಡುತ್ತಿದ್ದರು. ಇದಕ್ಕಾಗಿ ಈ ಘಟನೆ ನಡೆಯುತ್ತಿದ್ದ ಈ ದ್ವೀಪದ ನೀರನ್ನು ಮೃತ್ಯುಜಲ, ಕಾಲಪಾನಿ ಎಂದು ಕರೆಯಲಾಗಿದೆ. "ಅಂಡಮಾನಿನಲ್ಲಿರುವ ಕಾಡನ್ನು ಕಡಿದು, ಮನುಷ್ಯ ವಾಸಕ್ಕೆ ಯೋಗ್ಯವಾಗಿಸಿ, ಜೈಲನ್ನು ಕಟ್ಟಿದವರು ನಮ್ಮ ಸ್ವಾತಂತ್ರ್ಯದ ಹೋರಾಟಗಾರರೇ. ಉಡಲು ಸರಿಯಾದ ಬಟ್ಟೆ ಕೊಡದೆ, ಉಣ್ಣಲು ಹೊಟ್ಟೆ ತುಂಬಾ ಊಟ ಕೊಡದೆ, ಸಂಬಳವಿಲ್ಲದೆ ದುಡಿಸಿಕೊಂಡಿತು ಬ್ರಿಟಿಷ್ ಸತ್ತೆ" ಎಂಬ ಅಂಕಣದ ಮಾತಿನಲ್ಲಿ ಬ್ರಿಟಿಷ್ ಸರ್ಕಾರ ಭಾರತೀಯರನ್ನು ಅಮಾನವೀಯವಾಗಿ ನಡೆಸಿಕೊಂಡ ರೀತಿಯನ್ನು ಮನಗಾಣಬಹುದು. ಕರಾಳ ಅಧ್ಯಾಯವಾಗಿ ದೇಶದ ಇತಿಹಾಸದ ಪುಟಗಳಲ್ಲಿ ಮರೆಯಾದ ಇಂತಹ ಎಷ್ಟೋ ಸ್ಥಳಗಳು ಈ ಭೂಮಿಯ ಮೇಲಿರಬಹುದು. ಆ ಸ್ಥಳಗಳನ್ನು

ಗುರುತಿಸಿ, ಹೊರಜಗತ್ತಿಗೆ ತೋರಿಸಿದಷ್ಟು ಪ್ರಭುತ್ವದ ಕ್ರೂರ ಮುಖವಾಡಗಳು ಬಯಲಾಗುತ್ತವೆ.

ಏನೆಲ್ಲಾ ಸರ್ಕಾರದ ಯೋಜನೆಗಳಿದ್ದರೂ ಅಸಮಾನತೆಯ ಧೋರಣೆ ಅವುಗಳಲ್ಲಿ ಮಡುಗಟ್ಟಿದೆ. ಇದರ ನೇರ ದುಷ್ಪರಿಣಾಮಕ್ಕೆ ದೇಶದ ರೈತರು ಒಳಗಾಗುತ್ತಿದ್ದಾರೆ. ಮಹಿಳೆಯರು ಮತ್ತು ರೈತರಿಗೆ ಸಂಬಂಧಪಟ್ಟ ಇಂತಹ ವಿಚಾರಗಳನ್ನು ಸಾಕಷ್ಟು ಅಂಕಣಗಳು ಚರ್ಚಿಸುತ್ತವೆ. ಕೆ. ನೀಲಾ ಅವರ 'ಬಾಳ ಕೌದಿ' ಅಂಕಣ ಕೃತಿಯ ಅಂಕಣವು ವಿಧವಾ, ವೃದ್ಯಾಪ್ಯ ಮತ್ತು ಸಂಧ್ಯಾ ಸುರಕ್ಷಾ ವೇತನವನ್ನು ರಾಜ್ಯ ಸರ್ಕಾರ ತಕ್ಕ ಫಲಾನುಭವಿಗಳಿಗೆ ನೀಡುವ ಕಾರ್ಯದಿಂದ ಮೈಮರೆಯುತ್ತಿರುವುದರ ವಿಚಾರವನ್ನು ಬಯಲುಗೊಳಿಸುತ್ತದೆ. ಈ ಯೋಜನೆಗಳಿಗೆ ಒಳಗೊಳ್ಳುವ ಫಲಾನುಭವಿಗಳ ಆಯ್ಕೆಯಲ್ಲಿ ಸರ್ಕಾರದ ಸಿಬ್ಬಂದಿಗಳು ಅಪ್ರಾಮಾಣಿಕರಾಗಿ ತೋರುತ್ತಿದ್ದಾರೆ. ಈ ಪ್ರಜಾಪ್ರಭುತ್ವವಾದಿ ಸರ್ಕಾರ ಕಡುಬಡತನದಲ್ಲಿ ಒದ್ದಾಡುತ್ತಿರುವ ಜನರಿಗೆ ಭಿಕ್ಷಾಪಾತ್ರೆ ನೀಡಿ, ಮಠ–ಮಂದಿರಗಳಿಗೆ ಕೋಟಿಗಟ್ಟಲೆ ಧನ–ಕನಕವನ್ನು ಎರೆಯುತ್ತಿದೆ. ಹೊಟ್ಟೆಗೆ ಅನ್ನ ಕೊಟ್ಟ ರೈತರನ್ನು, ಈ ನಾಡು ಕಟ್ಟಿದವರನ್ನು ಉಪವಾಸ ಬಳಲಿಸುವ ಕಟುಕತನ ಮತ್ತು ಹೃದಯ ಹೀನತೆ ತೋರುತ್ತಿದೆ ಎಂದು ಪ್ರಜಾಪ್ರಭುತ್ವದ ಬಗ್ಗೆ ನಿರ್ಭಿಡೆಯ ಅವಹೇಳನ ಈ ಅಂಕಣದಲ್ಲಿ ಇದೆ. ಡಾ. ಸಬಿತಾ ಬನ್ನಾಡಿ ಅವರ 'ಗೂಡು ಮತ್ತು ಆಕಾಶ' ಅಂಕಣ ಕೃತಿಯ 'ರೈತವೇಷದಲ್ಲಿ ಕಾರ್ಪೊರೇಟ್ ಹದ್ದು' ಅಂಕಣ, ಸಬಿಹಾ ಭೂಮೀಗೌಡ ಅವರ 'ನಡುಮನೆ' ಅಂಕಣ ಕೃತಿಯ 'ರೊಕ್ಕ ಬ್ಯಾಡ, ಹೊಲಾ ಬೇಕು' ಅಂಕಣ ಮತ್ತು ಶಾರದಾ ಗೋಪಾಲ ಅವರ 'ಮಹಿಳೆ ಮತ್ತು ಅಭಿವೃದ್ಧಿ' ಅಂಕಣ ಕೃತಿಯ 'ಬಲಿಷ್ಠ ಸರ್ಕಾರದ ದುರ್ಬಲ ಕ್ಷಣಗಳು' ಅಂಕಣಗಳೂ ರೈತರ ಚಟುವಟಿಕೆಗಳ ಮೇಲೆ ನಿಯಂತ್ರಣ ಹೇರುವ ಪ್ರಭುತ್ವದ ದೌರ್ಜನ್ಯವನ್ನು ಚರ್ಚಿಸುತ್ತವೆ.

ಡಾ. ವಿನಯಾ ಒಕ್ಕುಂದ ಅವರ 'ಉಡಿಯಕ್ಕಿ' ಅಂಕಣ ಕೃತಿಯ 'ಸೋರುತಿಹುದು ಮನೆಯ ಮಾಳಿಗಿ' ಅಂಕಣವು ಜನರ ಆಹಾರದ ಆಯ್ಕೆಯ ಕ್ರಮವನ್ನು ಪ್ರಭುತ್ವ ತನ್ನ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುವ ಭಿನ್ನ ಧೋರಣೆಯನ್ನು ಒಳಗೊಂಡಿದೆ. ಈ ಅಂಕಣ ಗೋಹತ್ಯೆ ಕ್ರೌರ್ಯವನ್ನು ವಿರೋಧಿಸುತ್ತದೆ. ಗೋಹತ್ಯೆ ನಿಷೇಧ ಕಾಯ್ದೆಗೆ ತನ್ನ ಒಪ್ಪಿಗೆಯ ಮುದ್ರೆಯನ್ನು ಒತ್ತಿದರೂ ಅದರ ಹಿಂದಿನ ರಾಜಕೀಯ ಲಾಭದಾಟಕ್ಕೆ ದಲಿತರು, ಅಲ್ಪಸಂಖ್ಯಾತರ ಬದುಕು ಗುರಿಯಾಗುತ್ತಿದೆ ಎಂಬುದು ಈ ಅಂಕಣದಿಂದ ಗ್ರಹೀತವಾಗುವ ವಿಚಾರ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯ ರಾಜಕೀಯದಾಟವು ಸದಾ ಸಮಾಜದ ದುರ್ಬಲರನ್ನೇ ಗುರಿಮಾಡಿ, ಅಸಮಾನ ನೆಲೆಯಲ್ಲಿ ದಮನಿಸುವಲ್ಲಿ ಕ್ರಿಯಾಶೀಲವಾಗಿರುತ್ತದೆ ಎಂಬುದರ ಸೂಚನೆ ಕೊಡುತ್ತದೆ. ಇದು ಪ್ರಭುತ್ವದ ದುರ್ಬಲತೆಯೇ ಆಗಿದ್ದು, ತನ್ನ ಕೂಪವನ್ನು ತಾನೇ ತೋಡಿಕೊಳ್ಳುವ ಅವಿವೇಕದ ಕುರುಹೂ ಆಗಿದೆ.

ಪ್ರತಿಯೊಂದು ರಾಜಕೀಯ ಪಕ್ಷವು ತಾನು ಅಧಿಕಾರಕ್ಕೆ ಬಂದಾಗ ತನ್ನ ಚಿಂತನೆಗಳನ್ನು ಶಿಕ್ಷಣ ಕ್ಷೇತ್ರಕ್ಕೆ ಅಳವಡಿಸುವ ಆ ಮೂಲಕ ಭವಿಷ್ಯದಲ್ಲಿ ರಾಜಕೀಯ ಲಾಭ ಪಡೆಯಬಹುದೆಂಬ ಲೆಕ್ಕಾಚಾರದಲ್ಲಿ ಇರುತ್ತವೆ. ಈ ವಿಚಾರವನ್ನು ಧ್ವನಿಸುವ ಡಾ. ವಿನಯಾ ಒಕ್ಕುಂದ ಅವರ 'ಉಡಿಯಕ್ಕಿ' ಅಂಕಣ ಕೃತಿಯ 'ನಮ್ಮ ಮಕ್ಕಳು ನೀಡುವ ದೇಶಪ್ರೇಮದ ವ್ಯಾಖ್ಯಾನಗಳು' ಮತ್ತು 'ಸೂತಕದ ದಿನಗಳು ಮುಗಿಯುತ್ತವೆ ಸಂಕಟದ ದಿನಗಳಲ್ಲ' ಎಂಬ ಎರಡು ಅಂಕಣಗಳು ಪ್ರಸ್ತಾಪಿಸುತ್ತಾ ಕ್ರಮವಾಗಿ ಕನ್ಹಯ್ಯ ಮತ್ತು ರೋಹಿತ ವೇಮುಲಾ ಎಂಬ ಇಬ್ಬರು ಜೆ.ಎನ್.ಯು ವಿದ್ಯಾರ್ಥಿಗಳ ಮೇಲಾದ ರಾಜಕೀಯ ಪ್ರೇರಿತ ಶೋಷಣೆಯನ್ನು ಖಂಡಿಸುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ತನ್ನ ಹಿಡಿತ ಕಾಯ್ದುಕೊಳ್ಳುತ್ತಿರುವ ಪ್ರಭುತ್ವದ ವಿರುದ್ಧ ಆಕ್ರೋಶದ ದನಿ ಎತ್ತುತ್ತದೆ. ಪ್ರಭುತ್ವವು ತನ್ನ

ರಾಜಕೀಯದಾಟದಿಂದ ಶಿಕ್ಷಣ ಸಂಸ್ಥೆಗಳಲ್ಲಿರುವ ಬಡದಲಿತ ವಿದ್ಯಾರ್ಥಿಗಳನ್ನು ಬಿಡದೆ ಶೋಷಿಸುವ ಕ್ರೌರ್ಯವನ್ನು ಪ್ರದರ್ಶಿಸುತ್ತಿದೆ ಎಂಬ ವಿಚಾರವು ಈ ಅಂಕಣಗಳಿಂದ ವೇದ್ಯವಾಗುತ್ತದೆ. ಆಡಳಿತದ ಚುಕ್ಕಾಣಿ ಹಿಡಿದಿರುವ ಪ್ರಭುತ್ವ ಪ್ರಜಾಪ್ರಭುತ್ವದ ಭಾವಿ ಉತ್ತಮ ಪ್ರಜೆಗಳನ್ನು ಸೃಷ್ಟಿಸುವ ಜವಾಬ್ದಾರಿಯನ್ನು ತನ್ನ ಸ್ವಾರ್ಥಕ್ಕಾಗಿ ತಾನೇ ಮರೆತಂತೆ ಜಾಣಕುರುಡಿನ ಆಟವಾಡುತ್ತಿದೆ.

ಆರ್. ಇಂದಿರಾ ಅವರ 'ಹೊಸ ದಾರಿ 9–10' ಅಂಕಣ ಕೃತಿಯ 'ಪ್ರಜಾಪ್ರಭುತ್ವ ತೂಗುತ್ತಿದೆ ದ್ವೇಷದ ಉಯ್ಯಾಲೆಯಲಿ' ಎಂಬ ಅಂಕಣವು ಪ್ರಜಾಸತ್ತಾತ್ಮಕ ವ್ಯವಸ್ಥೆಯ ಮಾತಾನಾಡುವ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ದುರ್ಬಳಕೆ ಮಾಡಿಕೊಂಡು ಪ್ರಚೋದನಕಾರಿ ಹೇಳಿಕೆಗಳನ್ನು ನೀಡುತ್ತಾ ಪ್ರಜಾಸತ್ತೆಯ ಮೌಲ್ಯಗಳನ್ನು ಗಾಳಿಗೆ ತೂರುತ್ತಿರುವ ಪ್ರಜಾಪ್ರಭುತ್ವದ ಜನನಾಯಕರ ವಿವೇಕತನವನ್ನು ಬಯಲಿಗೆಳೆಯುತ್ತದೆ. ಅಧಿಕಾರ ರಾಜಕಾರಣವು ಸಾಮಾಜಿಕ ಸಹಜೀವನವನ್ನು ಛಿದ್ರಗೊಳಿಸುತ್ತಾ ಸಮಾಜದ ಅಮಾಯಕರಲ್ಲಿ ಹಿಂಸೋನ್ಮಾದ ಹೆಚ್ಚಿಸುತ್ತಿದೆ ಎಂದು ಸಾರಸಗಟಾಗಿ ಇದೇ ಕೃತಿಯ 'ಹಿಂಸೆ ಎಂಬುದು ಹಾದಿ ಹಾಡು' ಅಂಕಣವು ಸಾರುತ್ತದೆ. ಇದೇ ಕೃತಿಯ 'ಹಸಿವೆಂಬ ಹೆಬ್ಬಾವು' ಅಂಕಣವು ಸರ್ಕಾರದ ಜಿಎಸ್‌ಟಿಯಂತಹ ಪರೋಕ್ಷ ತೆರಿಗೆ ಹೆಚ್ಚಳದಿಂದ ಬಡವರ ಬದುಕು ಇನ್ನಷ್ಟು ಹೈರಾಣಾಗುತ್ತಿದ್ದರೂ ಪ್ರಭುತ್ವವು ಬಡವರನ್ನು ಕುರಿತು ನಿಷ್ಕಾಳಜಿ ತೋರುತ್ತ, ಸಾಧಕ ಸ್ಥಾನದಲ್ಲಿ ಮುಳುಗಿರುವುದು ನಾಗರಿಕ ಕ್ರೌರ್ಯ ಎಂದು ಬಿಂಬಿಸುತ್ತದೆ. ಬಡಜನರ ಹಸಿವಿನ ಬದುಕಿನ ಮುಂದುವರಿಕೆಗೆ ಪ್ರಭುತ್ವದ ಅಸಮಾನ ಧೋರಣೆಯೇ ಕಾರಣ ಎಂದು ಈ ಅಂಕಣ ಬರಹ ಗುರಿ ಮಾಡುತ್ತದೆ.

ಕೆ. ನೀಲಾ ಅವರ 'ಬಾಳ ಕೌದಿ' ಅಂಕಣ ಕೃತಿಯ 'ಬೇಲಿಯೇ ಎದ್ದು ಹೊಲ ಮೈಯ್ದದ್ದು' ಅಂಕಣವು ಮಹಿಳೆಯರು ಸಬಲೀಕರಣ ಹೊಂದಲು ಪೂರಕ ಯೋಜನೆ ವಾತಾವರಣ ನಿರ್ಮಿಸಬೇಕಾದ ಪ್ರಭುತ್ವವೇ ತಮ್ಮ ರಾಜಕೀಯ ಕ್ಷೇತ್ರದೊಳಗೆ ಕಾಲಿಟ್ಟಿರುವ ಮಹಿಳೆಯ ಕಾರ್ಯಗಳನ್ನು ದಾಳವಾಗಿ ಬಳಸಿಕೊಳ್ಳುತ್ತೆಂಬ ವಿಚಾರವನ್ನು ಸಾಕ್ಷೀಕರಿಸುತ್ತದೆ. ಪ್ರಜಾಪ್ರಭುತ್ವ ಮೌಲ್ಯಗಳನ್ನೇ ಕಿತ್ತುಹಾಕಿ ಅಧಿಕಾರ ನಿರ್ವಹಿಸುತ್ತಾ ಮಹಿಳೆಯರ ಬಗೆಗೆ ಗೌರವ, ಮಾನವೀಯ ಕಾಳಜಿ, ನ್ಯಾಯಯುತ ದೃಷ್ಟಿಕೋನ ಇಟ್ಟುಕೊಳ್ಳದ ಪ್ರಭುತ್ವದ ಕ್ರೌರ್ಯ ಪರಮಾವಧಿ ಮುಟ್ಟಿರುವ ಸೂಚನೆಯೂ ಇದೆ.

ಆರ್. ಪೂರ್ಣಿಮಾ ಅವರ 'ಮಣ್ಣಿನ ಕಣ್ಣು' ಅಂಕಣ ಕೃತಿಯ 'ಸತ್ಯಾಗ್ರಹದ ಮಣ್ಣಿನಲ್ಲಿ ಜನಾಗ್ರಹದ ಮೊಳಕೆ ಮೂಡಬೇಕು' ಅಂಕಣವು ಪ್ರಭುತ್ವ ತೋರುವ ಅಸಮಾನತೆಯನ್ನು, ದೌರ್ಜನ್ಯವನ್ನು ಜನರು ತಮ್ಮ ಪ್ರತಿಭಟನೆಯಿಂದಲೇ ಹತ್ತಿಕ್ಕಬೇಕೆಂದು ಒತ್ತಾಯಿಸುತ್ತದೆ. ಚಂದ್ರಮತಿ ಸೋಂದಾವರ 'ಆಟಕ್ಕೂ ಉಂಟು, ಲೆಕ್ಕಕ್ಕೂ ಉಂಟು' ಅಂಕಣ ಕೃತಿಯ 'ಜನಪ್ರತಿನಿಧಿತ್ವ ಹಣ ಮಾಡುವ ದಂದೆಯಲ್ಲ; ಜನರ ಆಕ್ರೋಶದ ಈಡೇರಿಕೆಯ ಸ್ಥಾನ' ಎಂಬ ಅಂಕಣವು ಪ್ರಜಾಪ್ರತಿನಿಧಿಗಳು ಸಾರ್ವಜನಿಕ ಕೆಲಸಗಳಿಗೂ ಲಂಚ ಸ್ವೀಕರಿಸುವ ಮೂಲಕ ಬಡವರನ್ನು ಶೋಷಿಸಿ ಭ್ರಷ್ಟತೆಯಲ್ಲಿ ತೊಡಗಿದೆ ಎಂಬ ವಿಚಾರವನ್ನು ಮನಗಾಣಿಸುತ್ತದೆ. ಇದೇ ಕೃತಿಯ 'ಪ್ರಭುತ್ವದೊಳಗಿನ ರಾಜಪ್ರಭುತ್ವ' ಅಂಕಣವು ಪ್ರಜೆಗಳ ಮೇಲೆ ಪ್ರಜಾಪ್ರಭುತ್ವದ ಹೆಸರಿನಲ್ಲಿ ನಿರುಂಕುಶ ಪ್ರಭುತ್ವವನ್ನು ನಡೆಸುತ್ತಿರುವ ಪ್ರಭುತ್ವ ವ್ಯವಸ್ಥೆಯನ್ನು ಧಿಕ್ಕರಿಸುತ್ತದೆ. ಸಂಕಮ್ಮ ಜಿ ಸಂಕಣ್ಣನವರ ಅವರ 'ಮಾಸದ ಹೆಜ್ಜೆಗಳು' ಅಂಕಣ ಕೃತಿಯ 'ಮತಿವಂತನಾಗು ಮತದಾರ ಪ್ರಭುವೇ' ಅಂಕಣ ಪಕ್ಷಭೇದ ನೆಲೆಯಿಂದ ಅಸಮಾನ ಧೋರಣೆ ಇಟ್ಟುಕೊಂಡು ಮತಿಹೀನನಾಗಿ ಅಧಿಕಾರ ಚಲಾಯಿಸುತ್ತದೆ ಎಂದು ಪ್ರಭುತ್ವವನ್ನು ಜಂತಿಸುತ್ತದೆ. ಮಂಜುಳಾ ಡಿ ಅವರ 'ಕೇದಿಗೆ ಗರಿ' ಅಂಕಣ ಕೃತಿಯ 'ಬಳಸಿ ಎಸೆಯುವ ಅಸ್ತ್ರಗಳು' ಅಂಕಣವು ಪ್ರಭುತ್ವದ ಪ್ರತಿನಿಧಿಗಳು ಪ್ರಜೆಗಳಲ್ಲಿ ತೋರಿಸುವ

ವರ್ತನೆಯನ್ನು ಚರ್ಚಿಸುತ್ತಾ ಪ್ರಜೆಗಳನ್ನು ತಮಗೆ ಬೇಕಾದಾಗ ತಮ್ಮ ಸ್ವಾರ್ಥ ಕೆಲಸಗಳಿಗೆ ಬಳಸಿಕೊಂಡು, ಬೇಡವಾದಾಗ ವಿನಾಕಾರಣ ಶೋಷಿಸಿ, ಅಸ್ತ್ರಗಳಂತೆ ಬಳಸಿ ಎಸೆಯುತ್ತವೆ ಎಂದು ಪ್ರಭುತ್ವದ ಸ್ವಾರ್ಥ ರಾಜಕಾರಣವನ್ನು ಟೀಕಿಸುತ್ತದೆ.

ಈ ಮೇಲೆ ಚರ್ಚಿಸಿ, ವಿಶ್ಲೇಷಿಸಿದಂತಹ 'ಪ್ರಭುತ್ವ: ಅಸಮಾನತೆಯ ನೆಲೆಗಳು' ವಿಷಯ ಕುರಿತ ಅಂಕಣಗಳು ಪ್ರಭುತ್ವದ ಚುಕ್ಕಾಣಿ ಹಿಡಿದವರು ಜನಹಿತ ಭಾವವನ್ನು ಹೊಂದಿ, ನಿಸ್ವಾರ್ಥತೆಯಿಂದ ಬಡವರ ಕಷ್ಟ ನಷ್ಟ ಅರಿತು, ಸಮಾನತೆ ತರಲು ಪ್ರಯತ್ನಿಸಬೇಕು ಎಂಬ ಆಶಯವನ್ನು ಹೊತ್ತಿವೆ. ಅಲ್ಲದೆ ಒಬ್ಬ ರಾಜಕಾರಣಿ ಅಥವಾ ಅಧಿಕಾರದಲ್ಲಿರುವ ರಾಜಕೀಯ ವ್ಯಕ್ತಿ ಒಳಿತಿನ ಲಕ್ಷಣಗಳನ್ನು ಮೈಗೂಡಿಸಿಕೊಂಡಿರಬೇಕು. ಸಮಾಜದ ಸೇವೆಯನ್ನು ಯಾವುದೇ ಆಡಂಬರವಿಲ್ಲದೆ, ದುಷ್ಟಸೇವಾ ಮನೋಭಾವವಿಲ್ಲದೆ ಸಮಾಜದ ಶಾಂತಿಗಾಗಿಯೇ ದುಡಿಯುವ ನಿಸ್ವಾರ್ಥ ಪ್ರಾಮಾಣಿಕ ವ್ಯಕ್ತಿತ್ವದವನಾಗಿರಬೇಕು. ಆದರೆ ಇಂದು ಭಾರತ ದೇಶದಲ್ಲಿ ಪ್ರಭುತ್ವದ ಜವಾಬ್ದಾರಿ ಹೊತ್ತವರು ಗಾಂಧೀ–ಬುದ್ಧರ ಬೆಳಕಿನ ತತ್ವವನ್ನೇ ಮರೆತು ಹೊಲಸು ರಾಜಕಾರಣ ಮಾಡುತ್ತ, ಓಟಿಗಾಗಿ ಮಾತ್ರ ಬೇಡುತ್ತ, ಪ್ರಭುತ್ವದ ಕುರ್ಚಿಗಾಗಿ ಆಸೆ ಪಡುತ್ತ, ಜನಹಿತವೆಂಬುದನ್ನು ಮೂಲೆ ಗುಂಪಾಗಿಸಿ ಅಸಮಾನ ಸಮಾಜದ ಸೃಷ್ಟಿಯಲ್ಲಿ ತೊಡಗಿದ್ದಾರೆ ಎಂಬ ವಾಸ್ತವಾಂಶದ ಅನಾವರಣವಿದೆ.

ಸರ್ವಾಧಿಕಾರತ್ವದಿಂದ ದೇಶದಲ್ಲಿ ಆರ್ಥಿಕ ಹಿನ್ನೆಲೆ, ಗಲಭೆಗಳು ಹೆಚ್ಚಾದರೆ, ಸರ್ವಾಧಿಕಾರದಿಂದ ಹೊರತಾದ ದೇಶಗಳಲ್ಲಿ ಆರ್ಥಿಕ ಅಭಿವೃದ್ಧಿ, ಶಿಕ್ಷಣ, ಆರೋಗ್ಯ ಸೌಲಭ್ಯ ಸಾಧಿತವಾಗುತ್ತದೆ. ನಿರಂಕುಶಪ್ರಭುತ್ವ ಇಡೀ ದೇಶವನ್ನು ದಾಸ್ಯಕ್ಕೀಡು ಮಾಡಿ ಶೋಷಿಸುತ್ತಾ ಸಾಗುತ್ತದೆ. ಇದರಿಂದ "ರಾಜಕೀಯ ಸಿದ್ಧಾಂತಗಳು ಯಾವುದೇ ಆಗಲಿ, ಅವುಗಳನ್ನಾಧರಿಸಿದ ಆಡಳಿತ ಯಾವುದೇ ಆಗಲಿ, ಮನುಷ್ಯನ ಮೂಲಭೂತ ಅಗತ್ಯಗಳನ್ನು ಪೂರೈಸಲು ಅವು ಅಶಕ್ಯವಾಗುವುದಾದರೆ, ಅವುಗಳಿಂದೇನು ಪ್ರಯೋಜನ ಎಂದು ಕೇಳಬೇಕಾಗಿದೆ."[2] ಇದು ಜನರ ವ್ಯವಸ್ಥಿತ ಸಂಘಟನೆಯಿಂದ ಸಾಧ್ಯ. ಇಂತಹ ಸಂಘಟನೆಯು ಅಧಿಕಾರದ ಬಲವನ್ನು ಹೊಂದುತ್ತವೆಯಾದ್ದರಿಂದ ಅಧಿಕಾರದ ಮೂಲವಾದ ಸಂಘಟನೆಯಿಂದ ಶೋಷಣೆಯನ್ನು ನಾಶಪಡಿಸಬಹುದು. ಇಂತಹ ಶೋಷಣಾಮುಕ್ತ ವಾತಾವರಣದಿಂದ ದೇಶವನ್ನು ಅತಿ ತುರ್ತಾಗಿ ನ್ಯಾಯ ಮತ್ತು ಸಮಾನತೆ ಆಧಾರದಲ್ಲಿ ಕಟ್ಟಿ, ಈ ದೇಶದ ಪ್ರಜೆಗಳ ಸ್ವಾತಂತ್ರ್ಯ, ಸಮಾನತೆ, ಹಕ್ಕುಗಳನ್ನು ಕಾಯ್ದುಕೊಳ್ಳಬಹುದು. ಹೀಗಾಗಿ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗೆ ತಾವೇ ಆರಿಸಿದ ಸರ್ಕಾರವನ್ನು ಪ್ರಶ್ನಿಸುವ ಅಧಿಕಾರವನ್ನು ನೀಡಲಾಗಿರುವುದರಿಂದ, ಸಂವಿಧಾನದಲ್ಲಿ ನೀಡಲಾದ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ಚಲಾಯಿಸಲು ಪ್ರಜೆಗಳಿಗೆ ಅಧಿಕಾರವಿರುವುದರಿಂದ, ಪ್ರಜಾಪ್ರಭುತ್ವದಲ್ಲಿ ಮತ ಚಲಾಯಿಸುವ ಪ್ರತಿಯೊಬ್ಬ ಪ್ರಜೆಯು ತಮ್ಮ ರಾಜಕೀಯ ಪ್ರಜ್ಞೆಯಿಂದ ಸರ್ವರನ್ನು ಒಡೆಯದಂತೆ ಹಿಡಿದು ಕೂಡಿಸುವ ಮಾನವತಾವಾದಕ್ಕೆ ಜೀವ ತುಂಬಬೇಕಿದೆ. ಈ ನಿಟ್ಟಿನಲ್ಲಿ ಪ್ರಭುತ್ವದ ಹಾದಿಯೂ ಅತ್ಯಂತ ಮಹತ್ವದ್ದು.

**ಕೊನೆಟಿಪ್ಪಣಿಗಳು**

1. ಬರಗೂರು ರಾಮಚಂದ್ರಪ್ಪ. (ಲೇ). *ಸರ್ವಾಧಿಕಾರ ಮತ್ತು ಸಂವೇದನಾಶೀಲತೆ.* ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ. ಪುಟ.220
2. ಶಿವರುದ್ರಪ್ಪ, ಜಿ.ಎಸ್. *ಸಮಗ್ರ ಗದ್ಯ*. ಸಂಪುಟ 2, ಪುಟ.538

**ಪರಾಮರ್ಶನ ಗ್ರಂಥಗಳು**


- ಬರಗೂರು ರಾಮಚಂದ್ರಪ್ಪ. (2012). ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ, ಅಂಕಿತ ಪುಸ್ತಕ.
- ಕೇಶವಶರ್ಮ, ಕೆ. (2019). ವಿಮರ್ಶೆಯ ಪರಿಕಲ್ಪನೆ. ದೇಸಿ ಪುಸ್ತಕ.

- ಕೇಶವಶರ್ಮ,ಕೆ. (2011). *ಆಧುನಿಕೋತ್ತರವಾದ.* ಗೀತಾಂಜಲಿ ಪುಸ್ತಕ ಪ್ರಕಾಶನ.
- ಶಿವರುದ್ರಪ್ಪ, ಎಸ್.ಎನ್ (2008). *ಸಮಕಾಲೀನ ಜಗತ್ತು.* ಪೌರಸ್ತ್ಯ ಪ್ರಕಾಶನ.
- ಶಿವರುದ್ರಪ್ಪ, ಜಿ.ಎಸ್. (2016). *ಸಮಗ್ರ ಗದ್ಯ.* ಸಂಪುಟ 2, ಪ್ರಿಯದರ್ಶಿನಿ ಪ್ರಕಾಶನ.
- ಸುರೇಶ್, ಕೆ.ಜೆ. (2007). *ರಾಜಕೀಯ ಸಿದ್ಧಾಂತ.* ಚೇತನ ಬುಕ್ ಹೌಸ್.